ಮೋಹಕ ಬಣ್ಣದಿಂದ ನೋಡುಗರನ್ನು ತಕ್ಷಣ ಸೆಳೆಯುವ ಹೂವು ಕನಕ ಚಂಪಕ. ಸಂಪಿಗೆಯಂಥ ಸುವಾಸನೆ ಬೀರುವ ಇದರ ಸೌಂದರ್ಯಕ್ಕೆ ಮನಸೋಲದವರಿಲ್ಲ. ಭಾರತ, ಏಷ್ಯಾದ ದಕ್ಷಿಣಪೂರ್ವ ದ್ವೀಪಗಳು, ಬರ್ಮಾ, ಆಸ್ಟ್ರೇಲಿಯಾಗಳು ಇದರ ಮೂಲ ನೆಲೆ.

ಎನೊನೇಸೀ ಕುಟುಂಬದ ಕನಕ ಚಂಪಕದ ಸಸ್ಯಶಾಸ್ತ್ರೀಯ ಹೆಸರು ಕಾನಂಗಾ ಓಡೊರಾಟಾ. ಇಂಗ್ಲಿಷ್‌ನಲ್ಲಿ ಯ್ಲಾಂಗ್ ಯ್ಲಾಂಗ್ ಟ್ರೀ ಎಂದು ಕರೆಯುವರು. ಕನ್ನಡದಲ್ಲಿ ಕನಾಂಗ, ಕಮಂಡ, ಅಪೂರ್ವ ಚಂಪಕ, ಜುಮುಕಿ ಸಂಪಿಗೆ, ಸಂಸ್ಕೃತದಲ್ಲಿ ಕನಕ ಚಂಪಕ, ತಮಿಳುನಲ್ಲಿ ಕರುಮುಗೈ, ತೆಲುಗಿನಲ್ಲಿ ಚೆಟ್ಟುಸಂಪಂಗಿ ಎನ್ನುವರು.

ಕನಕ ಚಂಪಕ 70 ಅಡಿಗಿಂತಲೂ ಹೆಚ್ಚು ಬೆಳೆಯಬಲ್ಲ ಮೃದು ಮರ. ರೆಂಬೆ, ಕೊಂಬೆಗಳು ನೆಲದತ್ತ ಬಾಗಿರುತ್ತವೆ. ಸಂಪಿಗೆ ಎಲೆ ಹೋಲಿಕೆಯ, ಆದರೆ ಕಿರಿಗಾತ್ರದ ಎಲೆಗಳು ಜೋತು ಬಿದ್ದಂತೆ ಕಾಣಿಸುತ್ತವೆ. ರೆಂಬೆಯಲ್ಲೇ ಬಿರಿಯುವ ಗೊಂಚಲು ಹೂಗಳು ಆರಂಭದಲ್ಲಿ ಹಸಿರು ಬಣ್ಣದಲ್ಲಿರುತ್ತವೆ. ದಳಗಳ ತುದಿ ಚೂಪಾಗಿದ್ದು ಸಂಪೂರ್ಣ ಅರಳಿದಾಗ ಗಾಢ ಹಳದಿ ಬಣ್ಣ ಪಡೆಯುತ್ತವೆ. ಕಾಯಿಯು ಆಕಾರ ಹಾಗೂ ಗಾತ್ರದಲ್ಲಿ ನೇರಳೆ ಹಣ್ಣನ್ನು ಹೋಲುತ್ತದೆ.



ಇದು ಅಲಂಕಾರಿಕ ಮರ. ಔಷಧೀಯವಾಗಿಯೂ ಬಹಳ ಉಪಯುಕ್ತ. ಹೂವು, ತೊಗಟೆ, ಎಲೆ, ಮೊಗ್ಗುಗಳನ್ನು ಮನೆಮದ್ದಾಗಿ ಬಳಸಬಹುದು. ಸೈನ್ಯುಸೈಟಿಸ್‌ನ ತಲೆನೋವಿಗೆ ಇದರ ಹಳದಿ ಬಣ್ಣ ತಳೆದ ಹೂಗಳನ್ನು 2 ಹಿಡಿ ತೆಗೆದುಕೊಂಡು ತೆಂಗಿನ ಹಾಲಲ್ಲಿ ಅರೆದು ಹಣೆ, ಕಣ್ಣಿನ ಸುತ್ತ, ಕುತ್ತಿಗೆಗೆ ದಿನದಲ್ಲಿ 2– 3 ಸಾರಿ ಹಚ್ಚಿದರೆ ಶಮನವಾಗುವುದು. ಕೈಕಾಲು ಸಂಧಿಗಳ ನೋವಿಗೆ ಎಲೆಗಳು ಹಾಗೂ ತೊಗಟೆ ಸೇರಿಸಿ ಜಜ್ಜಿ ಎಣ್ಣೆಯಲ್ಲಿ ಹಾಕಿ ಕುದಿಸಿ ತೈಲ ತಯಾರಿಸಿ ಲೇಪಿಸಿದರೆ ನಿವಾರಣೆಯಾಗುವುದು.

ಕನಕ ಚಂಪಕ ಹೂಗಳನ್ನು ಭಟ್ಟಿ ಇಳಿಸಿ ಯ್ಲಾಂಗ್ ಯ್ಲಾಂಗ್ ಸುಗಂಧ ತೈಲ ಪಡೆಯುತ್ತಾರೆ. ಈ ತೈಲಕ್ಕೆ ವಿಶ್ವದಾದ್ಯಂತ ಭಾರೀ ಬೇಡಿಕೆ ಇದೆ. ಮುಖ ಪ್ರಸಾಧನ, ಕೇಶ ತೈಲ, ಸಿದ್ಧೌಷಧಗಳಲ್ಲೂ ಇದನ್ನು ಬಳಸುತ್ತಾರೆ.

ಕನಕಚಂಪಕ ಮರಗಳನ್ನು ಗಾರ್ಡನ್‌ಗಳಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ, ಮನೆಯಂಗಳದಲ್ಲಿ ನೆಡಬಹುದು. ಬೀಜದಿಂದ ಸಸ್ಯಾಭಿವೃದ್ಧಿ ಮಾಡಬಹುದು. ಬಿಸಿಲು, ನೀರು ಸಾಕಷ್ಟು ದೊರೆತರೆ ಗಿಡ ಚೆನ್ನಾಗಿ ಬೆಳೆಯುತ್ತದೆ. ಇಂಥ ಉಪಕಾರಿ ಮರ ಈಗ ಕಾಣಸಿಗುವುದು ಅಪರೂಪ. ಅರಣ್ಯ ಇಲಾಖೆ, ತೋಟಗಾರಿಕೆ ಇಲಾಖೆಯವರು ಇದರ ಕೃಷಿ ಮಾಡಲು ಮನಸು ಮಾಡಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಸ್ನೇಹ ಶಾಲೆಯ ಔಷಧೀಯ ವನದಲ್ಲಿ ಈ ಮರವನ್ನು ನೋಡಬಹುದು. ಹಳದಿ ಹೂವಿನ ತೇರು ಹೊತ್ತು ನಿಂತು ಇಡೀ ಶಾಲೆಯನ್ನು ಘಮಘಮಿಸುವಂತೆ ಮಾಡಿದೆ. ■

